

**ಮೈಲಾರಪ್ಪ ಬೂದಿಹಾಳ**
ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್

# ಹಕ್ಕಿ ನೀ ಹಾರುವಾಗ



ಹಕ್ಕಿ ನೀ ಹಾರುವಾಗ ರೆಕ್ಕೆ ನಿನಗೆ ಸೋಲಲ್ವಾ?
ಮುಗಿಲಿನಲ್ಲಿ ಸುತ್ತುವಾಗ
ದಿಕ್ಕು ನಿನಗೆ ತಪ್ಪಲ್ವಾ?

ಕೂಡಿಕೊಂಡು ಸಾಗುವಾಗ
ಎಂಥ ಚಂದ ಸಾಲು
ಯಾರು ನಿಮಗೆ ಕಲಿಸಿದ್ದು
ಮನುಷ್ಯರಿಗಿಂತ ಮೇಲು

ಹಾರುವಾಗ ಚದುರಿ ಸಾಲು
ಹೇಗೆ ಕೂಡಿ ಸಾಗಿದೆ
ಒಗ್ಗಟ್ಟಿನಲ್ಲಿ ಬಲವಿರಲು
ನೀತಿ ನಮಗೂ ಬೇಕಿದೆ

ನಾಳೆಗಾಗಿ ನಿನ್ನ ಬಾಳು
ಚಿನ್ನದಂತೆ ಕೂಡಿದೆ
ಜಗವ ಸುತ್ತಿ ಒಲವ ಹಾಡಿ
ಪ್ರೀತಿ ಹಂಚ ಬೇಕಿದೆ

ಎಷ್ಟೇ ದೂರ ಹೋದರೂ
ಮರೆಯುವುದಿಲ್ಲ ನೆಲೆಯು
ಬಂದು ನೀ ಸೇರುವುದು
ಎಂಥ ಅದ್ಭುತ ಕಲೆಯು

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68